186

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ನಅಇ 90 ಬಿಎಂಆರ್ 2010

ಕರ್ನಾಟಕ ಸರ್ಕಾರದ ಸಚಿವಾಲಯ,
4ನೇ ಮಹಡಿ, ವಿಕಾಸಸೌಧ,
ಬೆಂಗಳೂರು, ದಿನಾಂಕ.29-09-2010.

<u>ಇವರಿಂದ:-</u>
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

<u>ಇವರಿಗೆ:-</u>
ಅಪರ ಮುಖ್ಯ ಕಾರ್ಯದರ್ಶಿಗಳು, ಹಾಗೂ ಮಹಾನಗರ ಆಯುಕ್ತರು,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಮಾನ್ಯರೆ,

ವಿಷಯ: ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಆನೇಕಲ್,ಹೊಸಕೋಟೆ, ಕನಕಪುರ,ಮಾಗಡಿ ಮತ್ತು ನೆಲಮಂಗಲ, ಯೋಜನಾ ವಲಯ-1 ಹಾಗೂ ಇಂಟರ್‌ಸ್ಟ್ರೀಯಲ್ ವಲಯಗಳಲ್ಲಿ ಬರುವ ಕೆರೆಗಳಲ್ಲಿ ನೀರು ಸಂರಕ್ಷಣೆ (Rejuvenation of Tanks) ಸಂಬಂಧ ಖಾಸಗಿ ವಿನ್ಯಾಸ ಮಾಲೀಕರಿಂದ ಹೆಚ್ಚುವರಿ ಶುಲ್ಕ ವಸೂಲಿ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರದ ಸಂಖ್ಯೆ: ನಅಇ 81 ಬಿಎಂಆರ್ 2007 ದಿನಾಂಕ: 11.03.2010.
2. ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರ ಪತ್ರದ ಸಂಖ್ಯೆ: ಬಿಎಂಆರ್‌ಡಿಎ/ಟಾಸ್ಕ್ ಫೋರ್ಸ್‌ಸಿಆರ್/49/2009-10 ದಿನಾಂಕ: 20.05.2010.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1ರ ಪತ್ರದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಿನ್ಯಾಸ ಮಂಜೂರಾತಿಗಾಗಿ ಬರುವ ಖಾಸಗಿ ಅಭಿವೃದ್ಧಿದಾರರಿಂದ ಕೆರೆಗಳ ಸಂರಕ್ಷಣೆಗಾಗಿ ಪ್ರತಿ ಎಕರೆಗೆ ಅಭಿವೃದ್ಧಿ ಶುಲ್ಕವಾಗಿ ರೂ. 1 ಲಕ್ಷ ಗಳನ್ನು ನಿಗದಿಪಡಿಸಿ ಸಂಗ್ರಹಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ18ಎ (i)ರನ್ವಯ ಮಂಜೂರಾತಿ ನೀಡಿರುತ್ತದೆ. ಅದರಂತೆ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಯೋಜನಾ ಪ್ರಾಧಿಕಾರಗಳಾದ ಆನೇಕಲ್,ಹೊಸಕೋಟೆ, ಕನಕಪುರ, ಮಾಗಡಿ ಮತ್ತು ನೆಲಮಂಗಲ ಯೋಜನಾ ಪ್ರಾಧಿಕಾರ ಹಾಗೂ ಯೋಜನಾ ವಲಯ-1 ಮತ್ತು ಇಂಟರ್‌ಸ್ಟ್ರೀಯಲ್ ವಲಯಗಳಲ್ಲಿ ಬರುವ ಕೆರೆಗಳಲ್ಲಿ ನೀರು ಸಂರಕ್ಷಣೆ (Rejuvenation of Tanks) ಸಂಬಂಧ ಖಾಸಗಿ ವಿನ್ಯಾಸ ಮಾಲೀಕರಿಂದ ಪ್ರತಿ ಎಕರೆಗೆ ರೂ. 1 ಲಕ್ಷಗಳಂತೆ (ಒಂದು ಲಕ್ಷ ರೂಪಾಯಿಗಳು ಮಾತ್ರ) ಕೆರೆಗಳ ಸಂರಕ್ಷಣಾ ಶುಲ್ಕವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18ಎ (i)ರನ್ವಯ ನಿಗದಿಪಡಿಸಿ ಸಂಗ್ರಹಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ತಮ್ಮ ನಂಬುಗೆಯ,

(ಎಂ.ಎಸ್. ಪ್ರೇಮಚಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

<u>ಪ್ರತಿ ಮಾಹಿತಿಗಾಗಿ:-</u>

ಸದಸ್ಯ ಕಾರ್ಯದರ್ಶಿಗಳು, ಆನೇಕಲ್, ಹೊಸಕೋಟೆ, ಕನಕಪುರ, ಮಾಗಡಿ ಮತ್ತು ನೆಲಮಂಗಲ ಹಾಗೂ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ